ಡೆಪ್ಯುಟಿ ಕಮಿಷನರ್‌ರವರು ಸರ್ಕಾರಕ್ಕೆ ಬರೆದು ಈ ತಹಸೀಲ್‌ದಾರ್‌ರವರು ಸರಿಯಿಲ್ಲ. ಅವರ ಮೇಲೆ ಅಲಿಗೇಷನ್ ಇದೆ. ಅದಕ್ಕೆ ಅವರನ್ನು ಬದಲಾವಣೆ ಮಾಡಬೇಕೆಂದು ಅವರು ಬರೆದಿದ್ದಾರೆ. ಅವರು ಬರೆದ ಮೊದಲನೆಯ ಲೆಟರ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಹೇಳಬೇಕು.

ಎರಡನೆಯದಾಗಿ, ಇಡೀ ಕರ್ನಾಟಕ ರಾಜ್ಯದ ಭವಿಷ್ಯದಲ್ಲಿ ೫ ವರ್ಷ ೧೦ ತಿಂಗಳು ಒಂದೇ ಕಡೆ ಇದ್ದ ತಹಸೀಲ್ದಾರ್ ಎಂದರೆ ಅವರೊಬ್ಬರೇ. ಇದರಲ್ಲಿ ರಾಜಕೀಯ ಬೆಂಬಲವಿದೆಯೋ ಏನೋ ಗೊತ್ತಿಲ್ಲ. ಇಷ್ಟು ಅಲಿಗೇಷನ್ ಇದ್ದರೂ ಕೂಡ ಡೆಪ್ಯುಟಿ ಕಮಿಷನರ್‌ರವರು ಬರೆದರೂ ಕೂಡ ಒಂದೇ ಕಡೆ ಇರಬೇಕೆಂದರೆ ಅದಕ್ಕೆ ಕಾರಣವೇನು ದಯವಿಟ್ಟು ತಿಳಿಸಬೇಕು?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ. ೧೦ನೇ ಜೂನ್ ೧೯೮೮ ರಂದು ಸರ್ಕಾರದವರು ಅವರ ಬಗ್ಗೆ ಎನ್‌ಕ್ವೈರಿ ಮಾಡಿ ರಿಪೋರ್ಟ್‌ನ್ನು ತೆಗೆದುಕೊಳ್ಳಬೇಕೆಂದು ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ನಮಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ಅವರು ೫ ವರ್ಷ ೧೦ ತಿಂಗಳು ಲ್ಯಾಂಡ್ ರಿಫಾರ್ಮ್ಸ್ ಸ್ಪೆಷಲ್ ತಹಸೀಲ್ದಾರರಾಗಿದ್ದರು. ಆಮೇಲೆ ರೆಗ್ಯೂಲರ್ ತಹಸೀಲ್ದಾರ್‌ರಾಗಿದ್ದರು. ಈಗ ಟ್ರಾನ್ಸ್‌ಫರ್ ಆಗಿದೆ, ಇದರಲ್ಲಿ ರಾಜಕೀಯ ಹಸ್ತಕ್ಷೇಪವೇನೂ ಇಲ್ಲ. ಅವರಲ್ಲಿ ತಪ್ಪಿದ್ದರೆ ಉಗ್ರಶಿಕ್ಷೆಗೆ ಒಳಪಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಟ್ರಾನ್ಸ್‌ಫರ್ ಮಾಡಿ, ಬೇರೆ ಕಡೆ ಕಳುಹಿಸಿ ಕೊಡಿ. ಅದರ ಬಗ್ಗೆ ನಮಗೇನೂ ಇಂಟರೆಸ್ಟ್ ಇಲ್ಲ. ಅಲಿಗೇಷನ್ ಏನು ಬಂದಿದೆ ಅವರ ಮೇಲೆ ಅದರ ಬಗ್ಗೆ ಆಗಲೇ ಡೆಪ್ಯುಟಿ ಕಮಿಷನರ್ ರಿಪೋರ್ಟ್ ಕಳುಹಿಸಿಕೊಟ್ಟಿದ್ದಾರೆ. ೮ನೇ ಜೂನ್ ೧೯೮೮ಕ್ಕೆ ಮುಂಚೆ ಮೊದಲಿದ್ದ ಡೆಪ್ಯುಟಿ ಕಮಿಷನರ್ ಶ್ರೀಮಾನ್ ಗೋರೆ ಅವರು ಇಂಥ ಆಫೀಸರ್‌ನ್ನು ನಾವು ನೋಡಿಯೇ ಇಲ್ಲವೆಂದು ಬರೆದ ತಕ್ಷಣ ಇವರನ್ನು ಬದಲಾವಣೆಮಾಡಿ ಬೇರೆಯವರನ್ನು ಹಾಕಬೇಕಾಗಿತ್ತು. ಅವರು ಬರೆದ ಮೇಲೆ ನಾವು ಪ್ರಶ್ನೆ ಹಾಕುವುದು ಸರಿಯಲ್ಲದಿದ್ದರೂ ತಮ್ಮ ಗಮನಕ್ಕೆ ತಂದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ. ದಯವಿಟ್ಟು ಇಂಥವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಕಾನೂನು ವಿರುದ್ಧ ಏನೂ ಕೆಲಸ ಮಾಡಬಾರದು, ಲಂಚ ತೆಗೆದುಕೊಳ್ಳಬಾರದು ಎನ್ನುವ ಭೀತಿ, ಭಯ ಹೊರಟು ಹೋಗುತ್ತದೆ. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳದೇ ಹೋದರೆ ಎನ್‌ಕ್ವೈರಿ ಹಾಗೆಯೇ ಮುಚ್ಚಿ ಹೋಗುತ್ತದೆ. ಹೊರಟು ಹೋದ ಬಿಟ್ಟುಬಿಡಿ ಎಂದಂತಾಗುತ್ತದೆ. ದಯವಿಟ್ಟು ಪೆಂಡಿಂಗ್ ಎನ್‌ಕ್ವೈರಿ ಎಂದು ಸಸ್‌ಪೆಂಡ್‌ನಲ್ಲಿ ಇಡಿ. ಹಿಂದಿದ್ದ ಡೆಪ್ಯುಟಿ ಕಮಿಷನರ್‌ರವರನ್ನು ಮತ್ತು ಡಿವಿಜನಲ್ ಕಮಿಷನರ್‌ರವರನ್ನು ಕೇಳಿ. ಸಿ.ಓ.ಡಿ. ಕಳುಹಿಸಿ ರಿಪೋರ್ಟ್‌ನ್ನು ತರಿಸಿಕೊಂಡು ದಯವಿಟ್ಟು ಅಂಥವರಿಗೆ ಶಿಕ್ಷೆಯನ್ನು ಕೊಡಬೇಕು. You should suspend him pending enquiry. That will give some relief to the people.

ಶ್ರೀ ಎಸ್. ಆರ್. ಬೊಮ್ಮಾಯಿ.—ರಿಪೋರ್ಟ್ ಕೇಳಿದ್ದೇವೆ. ರಿಪೋರ್ಟ್ ಬಂದಮೇಲೆ ಸಸ್‌ಪೆಂಡ್ ಮಾಡುತ್ತೇವೆ, ಅಗತ್ಯವಾದರೆ ಡಿಸ್‌ಮಿಸ್ ಮಾಡುತ್ತೇವೆ. ರಿಪೋರ್ಟ್‌ಗಾಗಿ ಕಾಯುತ್ತಿದ್ದೇವೆ.

ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸುವ ಕುರಿತು

೮೯೬(೧೯೮೭) ಶ್ರೀಮತಿ ಮನೋರಮ ಮದ್ವರಾಜ್ (ಉಡುಪಿ).—ಮಾನ್ಯ ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಜಮೀನುಗಳು ಕೃಷಿ ಜಮೀನುಗಳೆಂದು ವರ್ಗೀಕೃತವಾಗಿರುವುದು ನಿಜವೇ?

ಆ) ಮನೆ ಕಟ್ಟಲು ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿಕೊಳ್ಳಲು ಜನತೆ ತೀವ್ರತರ ತೊಂದರೆ ಅನುಭವಿಸುತ್ತಿದ್ದಾರೆ ಎಂಬ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಕೃಷಿ ಮಾಡಿರದೆ, ಕೃಷಿಯೇತರ ಉದ್ದೇಶಕ್ಕೆ ಉಪಯೋಗಿಸಿಕೊಂಡಿರುವ ಜಮೀನುಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಯೇತರ ಜಮೀನೆಂದು ಘೋಷಿಸಲಾಗುವುದೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು ತಮಾಷೆಗಾಗಿ ಕೇಳುತ್ತಿಲ್ಲ. ಅಲ್ಲಿಯ ಜನರು ತಮ್ಮ ವಾಸಕ್ಕೂ ಸ್ಥಿರವಾಗಿ ಮನೆಗಳನ್ನು ಕಟ್ಟಿಕೊಳ್ಳಲು ಅರ್ಜಿಯನ್ನು ಹಾಕಿದರೆ, ತಿಂಗಳುಗಟ್ಟಲೆಯಾದರೂ ಸಂಬಂಧಪಟ್ಟವರಿಂದ ಉತ್ತರ ಬರುವುದಿಲ್ಲ. ಅಲ್ಲಿ ಭ್ರಷ್ಟಾಚಾರ ಬಹಳಷ್ಟು ತಾಂಡವಾಡುತ್ತಿರುವ ಸಂದರ್ಭದಲ್ಲಿ ಮಧ್ಯಮ ವರ್ಗದವರು ಪ್ರವೇಶ ಮಾಡಿ ಆ ಜನರಿಂದ ಹಣ ಸುಲಿಗೆ ಮಾಡುತ್ತಿದ್ದಾರೆ. ಮತ್ತೆ ಅವರಿಗೆ ಬರತಕ್ಕಂಥ ಸವಲತ್ತುಗಳನ್ನು ಇವರು ಕಬಳಿಸುತ್ತಿದ್ದಾರೆ. ನಿಜವಾಗಿಯೂ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ., ತಾವು ವೇಶವನ್ನು ಮಾರಿಸಿಕೊಂಡು ಬಂದಾದರೂ ನೋಡಿ ಆ ಜನರಿಗೆ ಆಗುತ್ತಿರುವ ಕಷ್ಟ ಕಿರುಕುಳವನ್ನು ತಪ್ಪಿಸಬೇಕು. ಕೃಷಿಯೇತರ ಭೂಮಿ ಎಂದು ವರ್ಗೀಕರಣ ಮಾಡಿ, ಕನ್‌ವರ್ಟ್ ಮಾಡಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರಲ್ಲಿ ಮೊಂಡುತನದ ಪ್ರಶ್ನೆ ಇಲ್ಲ. ದಕ್ಷಿಣ ಕನ್ನಡ ಕೊಡಗು ಮತ್ತು ಕೊಳ್ಳೆಗಾಲಕ್ಕೆ ಹಿಂದಿನ ಮದರಾಸು ಕಾನೂನು ಅನ್ವಯವಾಗುತದೆ. ನಮ್ಮ ಕಾನೂನಿನಲ್ಲಿ ಅಂದರೆ ಲ್ಯಾಂಡ್ ಫಾರಂ ಆಕ್ಟ್ ಸೆಕ್ಷನ್ ೫೫ (೬) (ಎ) ನಲ್ಲಿ, ಏನು ಇದೆಯೆಂದರೆ:—

> "Dakshina kannada, Kodagu and Kollegal taluks of Mysore District where any land, excess for the purpose of agriculture has been diverted or used for any other purpose before 2-10-80, the date of commencement of the Karnataka Land Reforms Act (Amendment) 1981. the land so used together with the land appurtenet to any building..... not exceeding 3 times the built areain such building shall with effect from such date will deemed to have been permitted to be used for the purpose other than agriculture." ಎಂದು ಇದೆ.

ಕೃಷಿ ಭೂಮಿ ಮತ್ತು ಕೃಷಿಯೇತರ ಭೂಮಿಯೆಂದು ಈ ಮದರಾಸಿನ ಕಾನೂನಿನಲ್ಲಿ ವಿಂಗಡಣೆ ಮಾಡಿಲ್ಲ. ಈ ಭಾಗದವರಿಗೆ ವಿಶೇಷ ಸವಲತ್ತು ಇವೆ. ಅವರು ಕಟ್ಟಿಕೊಂಡರೆ ಆದರ ಮೂರು ಪಟ್ಟು ಜಾಗ ನಾನ್ ಅಗ್ರಿಕಲ್‌ಚರಲ್ ಆಗುತ್ತದೆ. ಪರ್ಮಿಷನ್ ಕೊಡುವುದರಲ್ಲಿ ವಿಳಂಭವಾಗುತ್ತದೆಂದು ಹೇಳುತ್ತಾರೆ. ಅದನ್ನು ನಿವಾರಣೆ ಮಾಡೋಣ. ಈಗಲೂ ಸಹ ಮದರಾಸು ಕಾನೂನು ಅಲ್ಲಿ ಮುಂದುವರಿಯುತ್ತಿದೆ. ಅಗ್ರಿಕಲ್‌ಚರಲ್ ಮತ್ತು ನಾನ್ ಅಗ್ರಿಚರಲ್ ಎಂದು ಡಿವಿಜನ್ ಮಾಡಿಲ್ಲ.. ಈಗಿರತಕ್ಕ ವಿಶೇಷತೆ ಸವಲತ್ತಿನ ಲಾಭವನ್ನು ಅವರು ಪಡೆದುಕೊಳ್ಳಬಹುದು. ವಿಂಗಡಣೆ ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೆ ಕಾಗಿದೆ. ಈಗೆ ನಾದರೂ ತೊಂದರೆ ಇದ್ದರೆ ಅದನ್ನು ನಿವಾರಣೆ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಮಂತ್ರಿಗಳು ದಕ್ಷಿಣ ಕನ್ನಡದಲ್ಲಿ ಈಗಾಗಲೇ ಸವಲತ್ತು ಇದೆ ಎಂದು ಹೇಳಿದ್ದಾರೆ. ಆದರೆ ತಾವು ಇಲ್ಲಿಗೆ ಬಂದು ಪರಿಶೀಲನೆ ಮಾಡಿದರ ಅಲ್ಲಿನ ಸ್ಥಿತಿ ಗೊತ್ತಾಗುತ್ತದೆ. ನಿಜವಾಗಿಯೂ ಅಲ್ಲಿ ಯಾವ ಸವಲತ್ತು ಇಲ್ಲ. ಇದೆಲ್ಲಾ ನಗರದ ಆಸ್ತಿ, ಕಲ್ಲು, ಬಂಡೆ, ಗುಡ್ಡ, ಇರತಕ್ಕ ಹೌಸ್ ಸೈಟ್‌ಗಳಲ್ಲಿ ಕೃಷಿ ಭೂಮಿ ಆಗಿದ್ದು ಕನ್‌ವರ್ಷನ್ ಆಗದೇ ಇರುವುದರಿಂದ ಬಹಳ ತೊಂದರೆಯನ್ನು ಜನ ಅನುಭವಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಮನೆ ಕಟ್ಟಿದರೆ ಡೀಮ್ಡ್ ಟು ಹ್ಯಾವ್ ಬೀನ್ ಕನ್‌ರ್ಟೆಡ್ ಎಂದು ಇದೆ ಆದರೆ ಈಗ ಮನೆ ಕಟ್ಟಿದರೆ ಆದಕ್ಕೆ ಕನ್‌ವರ್ಷನ್ ಬೇಕು ಎಂದು ಹೇಳುತ್ತಾರೆ. ಇದರ ಬಗ್ಗೆ ಈಗಾಗಲೇ ಅನೇಕ ಮನವಿಗಳು ಬಂದಿವೆ,

ಪ್ರತಿ ವರ್ಷ ಶಾಸಕರುಗಳಿಗೆ ಹಾಗೂ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗಲೆಲ್ಲಾ ಇದರ ಬಗ್ಗೆ ಬೇಡಿಕೆಯನ್ನು ಇಡುತ್ತಲೇ ಇದ್ದೇವೆ. ಈ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಇಲ್ಲವೆಂದು ಹೇಳಿದ್ದಾರೆ. ತಮ್ಮ ಗಮನಕ್ಕೆ ತರಲು ನಾವು ಏನು ಮಾಡಬೇಕು ? ಎರಡನೆಯದಾಗಿ, ಬೇರೆ ಜಿಲ್ಲೆಗಳಲ್ಲಿ ಯಾವ ರೀತಿ ಇದೆ, ಅದೇ ರೀತಿ ಇಲ್ಲೂ ಮಾಡಿ, ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಕಾನೂನು ನಮಗೂ ಅನ್ವಯ ಮಾಡಿ, ನಾವು ಕರ್ನಾಟಕದಲ್ಲಿದ್ದೇವೆ. ನಮಗೆ ಮದರಾಸು ಬೇಡ, ಈ ಕನ್‌ವರ್ಷನ್ ಶಿಕ್ಷೆ ನಮಗೆ ಏತಕ್ಕೆ ? ಈ ಕನ್‌ವರ್ಷನ್ ಆಗದೆ ಇರುವುದರಿಂದ ಬಹಳ ತೊಂದರೆಯಾಗುತ್ತಿದೆ, ಅಧ್ವಾನವಾಗುತ್ತಿದೆ, ಈ ಕೆಲಸವನ್ನು ಮಾಡಿಸಿಕೊಳ್ಳಬೇಕಾದರೆ ಲಂಚ ಕೊಡಬೇಕಾಗಿದೆ. ಈಗ ಈ ಕೆಲಸ ವಿಳಂಬವಾಗುತ್ತಾ ಇದೆ. ಆದ್ದರಿಂದ ಇಲ್ಲೂ ಕೂಡ ಅಗ್ರಿಕಲ್‌ಚರಲ್ ಮತ್ತು ನಾನ್ ಅಗ್ರಿಕಲ್‌ಚರಲ್ ಎಂದು ಸ್ಪೆಸಿಫೈ ಮಾಡಿ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಒಮ್ಮೆ ಹೋಗಿ ನೋಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೃಷಿ ಮತ್ತು ಕೃಷಿಯೇತರ ಎಂದು ವಿಂಗಡಣೆ ಮಾಡುವುದು ಅವಶ್ಯಕವಿದೆ. ಅದನ್ನು ಮಾಡಬೇಕಾಗಿದೆ. ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಇದು ಒಂದು ಪ್ರಾಮುಖ್ಯವಾದ ವಿಷಯವಾಗಿರುವುದರಿಂದ ನಾನು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ. ದಕ್ಷಿಣ ಕನ್ನಡದಲ್ಲಿ ಭಂಜರು ಭೂಮಿ ಕಲ್ಲು ಬಂಡೆ ಭೂಮಿ ಎಲ್ಲವನ್ನೂ ಕನ್‌ವರ್ಷನ್ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ೬ ತಿಂಗಳು ೧ ವರ್ಷ ಕಾಯಬೇಕಾಗಿದೆ. ಇದರ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದ್ದೇವೆ. ಮನವಿಗಳನ್ನು ಕೊಟ್ಟಿದ್ದೇವೆ. ಏತಕ್ಕೆ ಮದರಾಸ್ ಕಾನೂನು ನಮಗೆ ಬೇಕು ? ನಮಗೆ ಅದು ಬೇಡ, ನಾವು ಕರ್ನಾಟಕ ರಾಜ್ಯದಲ್ಲಿ ಸೇರಿದ್ದೇವೆ. ತಾವು ಆದಷ್ಟು ಬೇಗ ಒಂದು ತೊಂದರೆಯನ್ನು ಹಾಗೂ ಗಂಡಾಂತರವನ್ನು ತಪ್ಪಿಸಲು ಪ್ರಯತ್ನ ಮಾಡುತ್ತಿರಾ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಒಂದು ಸೆಕ್ಷನ್‌ಗೆ ಅಮೆಂಡ್‌ಮೆಂಟನ್ನು ಏತಕ್ಕೆ ತಂದರು ಎಂಬುದು ಎಲ್ಲರಿಗೂ ಗೊತ್ತಿದೆ. ಯಾವಾಗ ಬೆಂಗಳೂರಿನಲ್ಲಿ ನಂದಿನಿ ಲೇಔಟ್ ಮುಂತಾದ ಕಡೆಗಳಲ್ಲಿ ಕೆಲವು ಜನ ಅಗ್ರಿಕಲ್‌ಚರಲ್ ಲ್ಯಾಂಡ್ ಅನ್ನು ನಾನ್ ಅಗ್ರಿಕಲ್‌ಚರ್ ಮಾಡಿಕೊಂಡು ಬಡಾವಣೆ ಮಾಡುತ್ತಿದ್ದರು. ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ಆಮೇಲೆ ರೆಗ್ಯೂಲರೈಸ್ ಮಾಡಿಕೊಳ್ಳುತ್ತಿದ್ದರು. ಆಗ ಶ್ರೀ ದೇವರಾಜ ಅರಸ್‌ರವರು ಇದರಿಂದ ಹ್ಯಾಪಸಾರ್ಡ್ ಡೆವಲಪ್‌ಮೆಂಟ್ ಆಗುತ್ತದೆ ಎಂಬ ಉದ್ದೇಶದಿಂದ ಒಂದು ಅಮೆಂಡ್‌ಮೆಂಟ್ ತರಬೇಕೆಂದು ತಂದರು. ಅದೇ ಕಾಲದಲ್ಲಿ ಸೌತ್ ಕೆನರಾದವರು ಪ್ರೊಟೆಸ್ಟ್ ಮಾಡಿದರು. ಇದು ಎಲ್ಲಿರಿಗೂ ಅನ್ವಯಿಸುತ್ತದೆ. ೧೯೮೧ಕ್ಕೆ ಮುಂಚೆ ಯಾವ ಭೂಮಿಯನ್ನು ಎನ್‌ಕ್ರೋಚ್ ಮಾಡಿಕೊಂಡು ಮನೆ ಕಟ್ಟಿದ್ದಾರೋ ಅಥವಾ ಅಗ್ರಿಕಲ್ಚರಲ್ ಲ್ಯಾಂಡ್ ಮೇಲೆ ಮನೆ ಕಟ್ಟಿದ್ದಾರೋ ಅದರ ೩ ಪಟ್ಟು ಜಮೀನನ್ನು ನಾನ್ ಅಗ್ರಿಕಲ್ಚರಲ್ ಲ್ಯಾಂಡ್ ಮಾಡಿಕೊಡಬೇಕೆಂದು ಕೇಳುತ್ತಿದ್ದಾರೆ. ಮದ್ರಾಸ್ ಆಕ್ಟ್ ಆವರಿಗೆ ಅಪ್ಲಿಕಬಲ್ ಆಗುವುದಿಲ್ಲ. ೧೯೮೧ರಲ್ಲಿ ಆದುದಷ್ಟಕ್ಕೆ ರಿಲೀಫ್ ಕೊಟ್ಟಿದ್ದಾರೆ. ಅಲ್ಲಿ ಜಮೀನು ಕಡಿಮೆ. ಇಲ್ಲಿ ನಾವು ಎಕರೆ, ಗುಂಟೆ ಅಂದರೆ ಅಲ್ಲಿ ಬರೀ ಸೆಂಟ್ಸ್ ಆನ್ನುತ್ತಾರೆ. ದಯವಿಟ್ಟು ಈ ದಿಸೆಯಲ್ಲಿ ಸ್ಪೆಷಲ್ ಕನ್‌ಸೇಷನ್ ಕೊಟ್ಟು ಮನೆ ಕಟ್ಟಿಕೊಳ್ಳುವುದಕ್ಕೆ ಡೈರೆಕ್ಷನ್ ಕೊಡಿ, ಇಲ್ಲದಿದ್ದರೆ ಅಲ್ಲಿ ಕರೆಪ್ಷನ್ ಸೆಂಟರ್ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಕ್ಷಣ ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಇನ್ನೂ ಆ ಸವಲತ್ತು ಮುಂದುವರಿದಿದೆ ಎಂದು ಇತ್ತು. ಆದ್ದರಿಂದ ಆ ಬಗ್ಗೆ ಇಲ್ಲಿ ವಿಚಾರ ಮಾಡುವುದು ಬೇಡ ಅಲ್ಲಿಗೆ ಹೋಗಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವಾಗ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜುಲೈನಲ್ಲಿ ಮಾಡುತ್ತೇನೆ.